ಉತ್ತರವನ್ನು ಕೊಡಬೇಕಾಗುತ್ತದೆ. ಚರ್ಚೆಯ ಬಗ್ಗೆ ನಮ್ಮ ಅಭ್ಯಂತರವಿಲ್ಲ, ಅಲ್ಲದೆ ಚರ್ಚೆ ಆಗಲೇಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಆದರೆ ಸಮಯವನ್ನು ಯಾವಾಗ ನಿಗದಿ ಮಾಡುತ್ತೀರೆಂಬುದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : 68ನೇ ನಿಯಮದ ಪ್ರಕಾರ 7ನೇ ತಾರಿಖು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್ ಬಂಗಾರಪ್ಪ : ಇದನ್ನು ಕೊನೆಯ ದಿವಸ ತೆಗೆದುಕೊಳ್ಳುವುದಕ್ಕಿಂತ ಮೊದಲೇ ತೆಗೆದುಕೊಳ್ಳುವುದು ಸೂಕ್ತವೆಂದು ನನ್ನ ಭಾವನೆ. ಏಕೆಂದರೆ ಅವತ್ತು ಬೇರೆ ಬೇರೆ ವಿಚಾರಗಳು ಎದ್ದಾಗ ಇದು ಬಿದ್ದುಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅವತ್ತಿನ ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯವನ್ನು ಮೊದಲನೆಯದಾಗಿ ಸೇರಿಸಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಅಧ್ಯಕ್ಷರು : ಆಗಬಹುದು ಹಾಗೆಯೇ ಮಾಡುತ್ತೇನೆ.

<u>ಗಮನ ಸೆಳೆಯುವ ಸೂಚನೆಗಳು</u>

ವಿಷಯ : (1) ಬೀದರ್ ಜಿಲ್ಲೆಯ ಕಾರಂಜಿ ಯೋಜನೆಯಲ್ಲಿ 8 ಕೋಟಿ ರೂಪಾಯಿಗಳ ಅವ್ಯವಹಾರ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾಗ್) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಗೆ ನೀರಾವರಿ ಸೌಲಭ್ಯವನ್ನೊದಗಿಸುವ ದೃಷ್ಟಿಯಿಂದ ಅನುಷ್ಠಾನಗೊಳಿಸುತ್ತಿರುವ ಕಾರಂಜಿ ಯೋಜನೆಯ ಅನುಷ್ಠಾನ ಕಳಪೆ ಮಟ್ಟದ್ದಾಗಿದ್ದು ತಿರಸ್ಕರಿಸಲಾಗಿದು ಮಣ್ಣನ್ನೇ ಮತ್ತೆ ಕಾಮಗಾರಿಗೆ ಬಳಸಿ ಇದರಲ್ಲಿ ಸುಮಾರು 8 ಕೋಟಿ ರೂ.ಗಳ ಅವ್ಯವಹಾರ ನಡೆದಿರುವುದು ಕಂಡುಬಂದಿದೆ. ಇಂಥ ಅವ್ಯವಹಾರಗಳಿಂದ ಕಾರಂಜಿ ಯೋಜನೆಯ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದುಇದರ ಬಗ್ಗೆ ಕೂಡಲೇ ಸೂಕ್ತ ವಿಚಾರಣೆ ನಡೆಸುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಎಂ ಕೃಷ್ಣ : (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಕಾರಂಜಿ ಯೋಜನೆಯನ್ನು ರೂ. 250 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇಲ್ಲಿಯವರೆಗೆ 6325 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ರೂ. 111.00 ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. ಈಗಾಗಲೇ ಮಾಡಿರುವ ಮಣ್ಣಿನ ಕಾಮಗಾರಿಗಳೆಂದರೆ ಅಣೆಕಟ್ಟಿನ ಒಡ್ಡಿನ ಭಾಗ, ರಂಜೋಳ ಸೇತುವೆಯ ಅಪ್ರೋಚ್‌ಗಳು, ಬಲದಂಡೆ ಕಾಲುವೆಯ 33ನೇ ಕಿ.ಮಿ.ನಲ್ಲಿ ಕಟ್ಟಲಾದ ಅಕ್ವೆಡೆಕ್ಟ್ ಅಪ್ರೋಚ್‌ಗಳು, ಬಲದಂಡೆ ಕಾಲುವೆ ಕಿ.ಮಿ. 65ರಲ್ಲಿನ ಒಟ್ಟು ಸದರಿ ಕಾಮಗಾರಿಗಳಿಗೆ ಬಳಸಲಾದ ಮಣ್ಣನ್ನು ಗುಣ ನಿಯಂತ್ರಣ ಪರೀಕ್ಷೆಗೆ ಒಳಪಡಿಸಿದ ನಂತರವೇ

ಬಳಸಲ್ಪಟ್ಟಿರುತ್ತದೆ. ಆದಕಾರಣ, ಕೆಲಸಕ್ಕೆ ಉಪಯೋಗಿಸಿರುವ ಮಣ್ಣನ್ನು ತಿರಸ್ಕೃತ ಮಣ್ಣೆಂದು ಹೇಳುವ ಪ್ರಮೇಯವು ಉದ್ಭವಿಸುವುದಿಲ್ಲ. ಆದುದರಿಂದ, ರೂ. 8.00 ಕೋಟಿಗಳ ಅವ್ಯವಹಾರ ನಡೆದಿರುವ ಪ್ರಸಂಗವು ಉದ್ಭವಿಸುವುದಿಲ್ಲ.

* ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲು ಅದು 6 ಕೋಟಿ ರೂ.ಗಳ ಯೋಜನೆ ಆಗಿತ್ತು. ಅನಂತರ ಅದು 250 ಕೋಟಿ ರೂ.ಗಳಿಗೆ ಹೋಯಿತು. ಇದು ಬಹುಶಃ ಇನ್ನೂ 250 ಕೋಟಿ ರೂ.ಗಳಾದರೂ ಮುಗಿಯುವುದಿಲ್ಲವೆಂದು ನನಗನಿಸುತ್ತದೆ. ಮುಂದೆ ಇದು ಒಂದು ಸಾವಿರ ಕೋಟಿ ರೂ.ಗೆ ಹೋದರೂ ಹೋಗಬಹುದು. ಅಲ್ಲಿ ರಿಜೆಕ್ಟ್ ಆಗಿದ್ದಂಥ ಮಣ್ಣನ್ನೇ ಮತ್ತೆ ಅಲ್ಲಿಗೇ ಹಾಕಿ ದೂರದಿಂದ ಲೀಡ್ ತೆಗೆದುಕೊಂಡಿದ್ದಾರೆ. ಇಂಥ ದುರ್ವ್ಯವಹಾರ ಅಲ್ಲಿ ನಡೆದಿದೆ. ತಾವು ಇತ್ತೀಚೆಗೆ ಒಂದು ಕೋಟಿ ರೂ.ಗಳ ಎಲ್.ಒ.ಸಿ.ಯನ್ನು ತಾವು ಏನು ಕೊಡಲಾಗಿದೆ, ಅದು ಆಂಧ್ರದ ಒಬ್ಬನೇ ಕಂಟ್ರ್ಯಾಕ್ಟರ್‌ಗೆ ಕೊಟ್ಟಿರತಕ್ಕದ್ದು. ಇದೇ ರೀತಿ ಅವ್ಯವಹಾರ ನಡೆಯುತ್ತಾ ಹೋದರೆ ಇನ್ನೂ 600 ಕೋಟಿ ರೂ. ಆದರೂ ಈ ಯೋಜನೆ ಮುಗಿಯುದಿಲ್ಲ. ಇತ್ತೀಚೆಗೆ ತಾವು ಡೀವಿಜನಷನ್ ಕಮಿಷನರ್‌ವರನ್ನು ಅಲ್ಲಿಗೆ ಕಳುಹಿಸಿದಿರಿ. ಅವರು ಹೋಗಿ ಕೇವಲ ಎಂ.ಟಿ. ರೆಕಾರ್ಡ್‌ನ್ನು ನೋಡಿಕೊಂಡು ಬಂದಿದ್ದಾರೆ. ಅದರಲ್ಲಿ ಮಣ್ಣು ಎಷ್ಟು ಹೊಂದಿರುತ್ತದೆ, ಎಷ್ಟು ದುಡ್ಡನ್ನು ಕೊಟ್ಟಿದ್ದಾರೆ ಎಂಬುದು ಇರುತ್ತದೆ. ಅದನ್ನು ಇವರು ನೋಡಿಕೊಂಡು ಬಂದರು. ಆದರೆ ಅವರು ಅಲ್ಲಿ ರಿಜೆಕ್ಟ್ ಆದಂಥ ಮಣ್ಣನ್ನು ಎಲ್ಲಿ ಹಾಕಿದರು ಎಂಬುದನ್ನು ನೋಡಬೇಕು. ಇವರು ಅಲ್ಲಿಯ ಮಣ್ಣನ್ನೇ ಅಲ್ಲಿಗೇ ಹಾಕಿ ದೂರದಿಂದ ಲೀಡ್ ಕೊಟ್ಟರು ಇದರಲ್ಲಿ ಅವ್ಯವಹಾರವಾಗಿದೆ ಎಂಬ ಅಂಶಗಳನ್ನು ಇದರಲ್ಲಿ ಹೇಳಿಲ್ಲ. ಆದ್ದರಿಂದ ಇದರ ಬಗ್ಗೆ ಸಿ.ಒ.ಡಿ.ಎನ್‌ಕ್ವೈರಿಯನ್ನು ಮಾಡಿಸಬೇಕು. ಇಲ್ಲದೇ ಇದೇ ರೀತಿ ಅವ್ಯವಹಾರವಾಗುವುದಾದರೆ ಮುಂದೆ 600-700 ಕೋಟಿ ರೂ. ಆದರೂ ಈ ಯೋಜನೆ ಮುಗಿಯುವುದಿಲ್ಲ. ಇದು ಬೀದರ್ ಜಿಲ್ಲೆಯ ರೈತರು ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ತಾವು ಕೇವಲ ಒಬ್ಬನೇ ಕಂಟ್ರಾಕ್ಟರ್‌ಗೆ ಇಷ್ಟೊಂದು ಹಣವನ್ನು ಕೊಟ್ಟಿದ್ದು ಸರಿಯಲ್ಲ. ದಯವಿಟ್ಟು ಇದನ್ನು ಸಿ.ಒ.ಡಿ. ಎನ್‌ಕ್ವೈರಿಗೆ ಒಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಅಲ್ಲಿದ್ದ ಮಣ್ಣನ್ನು ಗುಣನಿಯಂತ್ರಣ ಪರೀಕ್ಷೆಗೆ ಒಳಪಡಿಸದೇ ಉಪಯೋಗಿಸಲಾಗಿದೆ ಎಂಬ ಒಂದು ಆಪಾದನೆ ಬಂದಿತ್ತು . ಆದರೆ ಇದರ ಬಗ್ಗೆ ನಾವು ಎನ್‌ಕ್ವೈರಿ ಮಾಡಿಸಿದಾಗ ಆ ಮಣ್ಣನ್ನು ಗುಣನಿಯಂತ್ರಣ ಪರೀಕ್ಷೆಗೆ ಒಳಪಡಿಸಿದ ಮೇಲೆಯೇ ಉಪಯೋಗಿಸಲಾಗಿದೆ ಎಂಬ ವರದಿ ನಮಗೆ ಬಂದಿದೆ. ಈಗ ತಾವು ಜೂನ್ ವಿಚಾರದ ಬಗ್ಗೆ ಏನು ತಾವು ಪ್ರಸ್ತಾಪ ಮಾಡುತ್ತಿದ್ದೀರಿ, ಇದರ ಬಗ್ಗೆ ನಾನು ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಯಾವ ಮಣ್ಣು ಉಪಯೋಗಕ್ಕೆ ಬರುವುದಿಲ್ಲವೆಂದು ರಿಜೆಕ್ಟ್ ಮಾಡಿದ್ದರೋ ಅದೇ ಮಣ್ಣನ್ನೇ ಅಲ್ಲಿಗೆ ಹಾಕಿದ್ದಾರೆ.

ದೂರದಿಂದ ಲೀಡ್ ಕೊಟ್ಟು ಹಣವನ್ನು ತೆಗೆದುಕೊಂಡಿದ್ದಾರೆ. ಇದು ಕಾಂಟ್ರಾಕ್ಟ್‌ರ್‌ಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಈ ವ್ಯವಹಾರವಾಗಿದೆ. ಆದ್ದರಿಂದ ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಆಗಬೇಕು. ಆದರೆ ಯಾರೋ ಒಬ್ಬರಿಗೆ ದುಡ್ಡನ್ನು ತಿನ್ನಿಸುವುದರಿಂದ ಏನೂ ಉಪಯೋಗವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ನಾನು ಮಧ್ಯೆ ಪ್ರವೇಶಿಸಲು ಇಷ್ಟಪಡುವುದಿಲ್ಲ. ಆದರೆ ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಅಲ್ಲಿ ಹಣ ದುರುಪಯೋಗ, ಭ್ರಷ್ಟಾಚಾರ ನಡೆದಿದೆ ಎಂಬುದನ್ನು ತಾವು ಕೂಡ ಒಪ್ಪಿಕೊಳ್ಳುತ್ತಿದ್ದೀರಿ. ಮಾನ್ಯ ಸದಸ್ಯರು ಹೇಳಿದಂತೆ ತಾವು ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿಗೆ ಒಪ್ಪಿಕೊಳ್ಳಿ. ಇದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್.ಎಂ.ಕೃಷ್ಣ : ಇಂಥ ಪ್ರಶ್ನೆಗಳು ಬಂದಾಗಲೆಲ್ಲಾ ನಾವು ಸದಾ ಸಿದ್ಧ. ಇದರ ಬಗ್ಗೆ ಸಿ.ಒ.ಡಿ.ಎನ್‌ಕ್ವೈರಿಯನ್ನು ಮಾಡಿಸುತ್ತೇವೆ.

12.50 ಪಿಎಂ

ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಪುತ್ಥಳಿಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಬಗ್ಗೆ ಹಾಗೂ ಅವರ ಜನ್ಮ ದಿನಾಚರಣೆಯನ್ನು ಆಚರಿಸುವ ಬಗ್ಗೆ

* ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ದೇಶದ ಒಬ್ಬ ಹಿರಿಯ ಮುಖಂಡರಾದ ಹಾಗೂ ಕರ್ನಾಟಕ ಏಕೀಕರಣದ ಬಗ್ಗೆ ಶ್ರಮಿಸಿದಂಥ ಹಾಗೂ ಮಾಜಿ ಮುಖ್ಯ ಮಂತ್ರಿಗಳಾದ ಮಾನ್ಯ ಎಸ್. ನಿಜಲಿಂಗಪ್ಪನವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ, ಮತ್ತು ಅವರ ಜನ್ಮ ದಿನಾಚರಣೆಯನ್ನೂ ಕೂಡ ಸರ್ಕಾರವೇ ಆಚರಿಸಬೇಕೆಂಬ ಬಗ್ಗೆ ನಾನೂ, ಮಾನ್ಯ ಪಿ.ಜಿ.ಆರ್.ಸಿಂಧ್ಯ ಮಾನ್ಯ ಡಿ.ಬಿ.ಚಂದ್ರೇಗೌಡರು, ಯಡಿಯೂರಪ್ಪನವರು, ಈಶ್ವರಪ್ಪನವರೂ ಹಾಗೂ ಮಾನ್ಯ ದೇಶಪಾಂಡೆಯವರೂ, ಬೈರೇಗೌಡರು ಎಲ್ಲರೂ ಸೇರಿ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಮಾನ್ಯ ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಹಿರಿಯ ರಾಷ್ಟ್ರ ನಾಯಕರಾದ ಮಾನ್ಯ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಬಗ್ಗೆ ನಮಗೆ ಅಪಾರವಾದ ಅಭಿಮಾನ, ಪ್ರೇಮ ನಮ್ಮೆಲ್ಲರಲ್ಲೂ ಇದೆ. ಅಷ್ಟೇ ಅಲ್ಲ, ಇದರ ಬಗ್ಗೆ ನಮ್ಮ ಪಕ್ಷದವರದ್ದೂ ಕೂಡ ಒತ್ತಾಯವಿದೆ. ಅವರ ಬಗ್ಗೆ ಒಂದು ಪ್ರತಿಮೆಯನ್ನು ಅನಾವರಣ ಮಾಡಬೇಕು, ಇವತ್ತು ಅವರು 94ನೇ ಜನ್ಮ ದಿನೋತ್ಸವವನ್ನು ಕಾಣುತ್ತಿದ್ದಾರೆ